**◆ ನಿಮ್ಮ ಪ್ರಕಾರ ಬರಹಗಾರರಿಗೆ ಉತ್ತಮವಾದ ಪರಿಸ್ಥಿತಿಗಳು ಯಾವುದು? ನಿಮ್ಮ ಮೆಕ್ಸಿಕನ್ ಅನುಭವದಂತಹದ್ದೋ ಅಥವಾ...**

ಅದೇನು ಅಂತ ಹೇಳಲಾರೆ. ಅದು ವ್ಯಕ್ತಿಗತ ವಿಷಯ. ಒಬ್ಬೊಬ್ಬರಿಗೆ ಒಂದೊಂದು ಬೇಕು. ಯುವ ಕಲಾವಿದರಲ್ಲಿ ಕಾಣುತ್ತಿರುವ ಭಯಾನಕ ಸಂಗತಿ ಎಂದರೆ ಅವರು ಮಧ್ಯಮವರ್ಗದ ಮನಃಸ್ಥಿತಿ ಹೊಂದಿರುವುದು. ಮದುವೆ ಆಗುವುದು, ಮಕ್ಕಳನ್ನು ಹೆರುವುದು ಉಳಿದವರಂತೆ ಬದುಕುವುದು. ಮದುವೆ, ಮಕ್ಕಳ ಬಗ್ಗೆ ನನಗೆ ಆಕ್ಷೇಪಣೆಯಿಲ್ಲ. ಮನುಷ್ಯ ಬದುಕಿನ ಪರವಾಗಿದ್ದೇನೆ. ಆದರೆ, ನೀವು ಇದನ್ನೆಲ್ಲ ಮಾಡುತ್ತಾ ಕೂತರೆ ನೀವೇನು ಮಾಡಬೇಕೊ ಅದನ್ನು ಮಾಡಲಾಗುವುದಿಲ್ಲ. ಜಗತ್ತಿನ ಉಳಿದೆಲ್ಲ ವೃತ್ತಿಗಳಂತೆ ಕಲೆ ಎನ್ನುವುದು ಕೂಡ ವೃತ್ತಿ. ನಿಜವಾದ ಕಲಾವಿದನಿಗೆ ಜಗತ್ತಿನಲ್ಲಿ ಅದು ಗಾಳಿ, ನೀರಿನಂತಲ್ಲದಿದ್ದರೂ ಊಟ ಮತ್ತು ನೀರಿನಂತೆ ಬಹಳ ಸಹಜವಾದದ್ದು. ನಾವು ಬಹಳ ಏಕತಾನತೆಯ ಬದುಕನ್ನು ಬದುಕುತ್ತಿದ್ದೇವೆ. ಏನಾದರೂ ಮಾಡಬೇಕು ಅಂದುಕೊಂಡಿದ್ದಲ್ಲಿ ಕೆಲವನ್ನು ಬಿಡಬೇಕಾಗುತ್ತದೆ.

**◆ ಇನ್ನೂ ಕಲಾವಿದ ಎಂದು ಗುರುತಿಸಿಕೊಳ್ಳದವನಿಗೆ ಅದು ನಂಬಿಕೆಯ ನಡೆಯಾಗಿರುತ್ತದೆ.**

ಅದು ನಂಬಿಕೆಯ ನಡೆಯೇ. ಆದರೆ, ಅದಕ್ಕೆ ಧೈರ್ಯ ಬೇಕಾಗುತ್ತದೆ. ಧೈರ್ಯವಿಲ್ಲದಿದ್ದರೆ ಪ್ರಯೋಜನವಿಲ್ಲ. ಜನ ಬೇರೆ ವೃತ್ತಿಗಳಲ್ಲಿ, ಬದುಕಿನಲ್ಲಿ ಧೈರ್ಯವಿಲ್ಲದಿದ್ದರೆ ಹೇಗೆ ಸೋಲುವರೋ ಅದೇ ರೀತಿ ಇಲ್ಲೂ ಸೋಲುತ್ತಾರೆ. ಧೈರ್ಯ ಅತ್ಯಗತ್ಯ.

**◆ ವೃತ್ತಿಗೆ ಹೊಂದಿಕೊಳ್ಳುವಂತಹ ಜೀವನ ವಿಧಾನವನ್ನು ಆರಿಸಿಕೊಳ್ಳುವ ಕುರಿತು ಹೇಳುತ್ತಿರುವಿರಾ?**

